

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮುಜುಗರ ಹಾಗೂ ಅವಮಾನಕರ ಪ್ರಸಂಗಗಳು....

ಅನುದ್ದೇಶಪೂರ್ವಕವಾಗಿ ಸಮಾಜದ ರೀತಿರಿವಾಜುಗಳಿಗೆ ಭಿನ್ನವಾಗಿ ನಡೆದುಕೊಳ್ಳುವುದರಿಂದ ಅಥವಾ ಹಠಾತ್ತನೆ ನಿಮಗೆ ಅರಿವಿಲ್ಲದಂತೆ ಮಾಡುವ ಸಣ್ಣ ತಪ್ಪಿನಿಂದಾಗಿ ಉಂಟಾಗುವ ಮಾನಸಿಕ ಕ್ಲೇಶವೇ ಮುಜುಗರ. ಇದರಲ್ಲಿ ನೈತಿಕ ಪ್ರಶ್ನೆ ಅಷ್ಟಾಗಿ ಇರುವುದಿಲ್ಲವಾದರೂ ಕೆಲವೊಮ್ಮೆ ಮರ್ಯಾದೆಗೆ ಕುಂದುಂಟಾಗುವ ಸ್ಥಿತಿ ನಿರ್ಮಾಣವಾಗುತ್ತದೆ. ಸೈಕಲ್ ಹೊಡೆಯುತ್ತಾ ಶಾಲೆಗೆ ಹೋಗುವ ಹುಡುಗ ಬ್ಯಾಲೆನ್ಸ್ ತಪ್ಪಿ ಕೆಳಗೆ ಬೀಳುತ್ತಾನೆ. ಓರಿಗೆಯ ಹುಡುಗರೆಲ್ಲರೂ ಅವನು ಬೀಳುವುದನ್ನು ನೋಡಿ ನಗುತ್ತಾರೆ. ಬಿದ್ದ ಹುಡುಗನಿಗೆ ನಾಚಿಕೆಯಾಗುತ್ತದೆ. ತನಗೆ ಏನೂ ಆಗಿಲ್ಲವೆಂಬಂತೆ ನಟಿಸಹೋದರೆ ಮತ್ತಷ್ಟೂ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ನೀವು ಬಿದ್ದಾಗ ನಗುವವರನ್ನು ನೋಡಿ ಅಸಂತುಷ್ಟಿ ವ್ಯಕ್ತಪಡಿಸುವ ಬದಲು ನೀವೂ ಅವರೊಂದಿಗೆ ಜೊತೆಗೂಡಿ ನಗುವುದೇ ಅದಕ್ಕೆ ಪರಿಹಾರವೆಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ನಿಮ್ಮನ್ನು ನೀವೇ ನೋಡಿಕೊಂಡು ನಗುವಾಗ ಬೇರೆಯವರಿಗೆ ನಗು ಮುಂದುವರಿಸುವುದು ಕಷ್ಟವಾಗುತ್ತದೆ. ಹೀಗಾಗಿ ಅಪಹಾಸ್ಯ ಮಾಡುವುದು ಅಲ್ಲಿಗೇ ನಿಂತುಬಿಡುತ್ತದೆ. ಏನು ಮಾಡಿದ್ದರಿಂದ ನೀವು ನಗೆಪಾಟಲಿಗೆ ಈಡಾದಿರಿ ಎಂಬುದನ್ನು ನೆನಪಿಟ್ಟುಕೊಂಡು ಮತ್ತೆ ಅಂತಹ ಪ್ರಸಂಗ ಬರದಂತೆ ಎಚ್ಚರ ವಹಿಸಬೇಕೆಂದು ಹೇಳುತ್ತಾರೆ. ಪ್ರತಿಯೊಬ್ಬರ ಜೀವನದಲ್ಲಿ ಒಂದಲ್ಲಾ ಒಂದು ಮುಜುಗರ ಪ್ರಸಂಗ ಘಟಿಸುವುದು ಸಹಜ. ಅಂತಹ ಪ್ರಸಂಗಗಳು ಹೆಚ್ಚಿನ ಜನರ ಕಣ್ಣಿಗೆ ಬಿದ್ದಷ್ಟೂ ಮುಜುಗರಭಾವನೆಯ ತೀವ್ರತೆಯು ಹೆಚ್ಚಾಗುತ್ತದೆ. ಅದನ್ನು ಮರೆಮಾಚಲು ಪ್ರಯತ್ನಿಸಿದಷ್ಟೂ ಹೆಚ್ಚಿನ ಅಪಹಾಸ್ಯಕ್ಕೆ ಗುರಿಯಾಗುತ್ತೀರಿ. ಸುಮ್ಮನೆ ಅದನ್ನು ಉದಾಸೀನಮಾಡಿಬಿಡುವುದು ಅಥವಾ ಎಲ್ಲರಂತೆ ನಕ್ಕುಬಿಡುವುದು ಒಳ್ಳೆಯದು. ಜನ ಬೇಗನೆ ಮರೆಯುತ್ತಾರೆ. ಅಂತಹ ಸಂದರ್ಭಗಳಲ್ಲಿ ಅಳುವುದರಿಂದಾಗಲೀ, ಅಸಹನೆ ವ್ಯಕ್ತಪಡಿಸುವುದರಿಂದಾಗಲೀ, ಕೋಪಿಸಿಕೊಳ್ಳುವುದರಿಂದಾಗಲೀ ಪ್ರಯೋಜನವಿಲ್ಲ ಎನ್ನುತ್ತಾರೆ.

ಮುಜುಗರ ಪ್ರಸಂಗ ಒಬ್ಬರ ನಡವಳಿಕೆಯಿಂದ ಘಟಿಸಿದರೂ ಕೆಲವೊಮ್ಮೆ ಏನೂ ತಪ್ಪು ಮಾಡದ ಇನ್ನೊಬ್ಬರೂ ಸಹ ಮುಜುಗರಕ್ಕೆ ಒಳಗಾಗಬೇಕಾದ ಸಂದರ್ಭ ಒದಗಿಬರುತ್ತದೆ. ಸಿರಿಗೆರೆಯ ನಮ್ಮ ಮಠದ ಶಾಲೆಯೊಂದರಲ್ಲಿ ಸಿ.ಪಿ.ಬಿ ಎಂಬ ಆಂಗ್ಲಭಾಷಾ ಪ್ರಾಧ್ಯಾಪಕರು ಇದ್ದರು. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದ ಅವರನ್ನು ಈಗಲೂ ಅನೇಕರು ಸ್ಮರಿಸುತ್ತಾರೆ. ಸಂಜೆ ಹೊತ್ತು ಮಠದಿಂದ ಶಾಲಾಕಾಲೇಜುಗಳ ಕ್ಯಾಂಪಸ್ ಕಡೆಗೆ ನಾವು ವಾಯುವಿಹಾರ ಹೋಗುವ ಸಂದರ್ಭದಲ್ಲಿ ದಾರಿಯಲ್ಲಿ ಭೇಟಿಯಾದಾಗ ಪಾದಮುಟ್ಟಿ ನಮಸ್ಕರಿಸುತ್ತಿದ್ದರು. ಅವರು ವಾಸವಾಗಿದ್ದ ಮನೆ ದಾರಿಯಲ್ಲಿಯೇ ಇದ್ದುದರಿಂದ ಅವರ ನಮ್ಮ ಭೇಟಿ ಆಗಾಗ್ಗೆ ಆಗುತ್ತಲೇ ಇತ್ತು. ನಿವೃತ್ತರಾದ ಮೇಲೂ ಬಹಳ ವರ್ಷ ಸಿರಿಗೆರೆಯಲ್ಲಿಯೇ ನೆಲಸಿದ್ದ ಅವರಿಗೆ ವಯೋಧರ್ಮದ ಕಾರಣದಿಂದಾಗಿ ಕಣ್ಣು ಮಂಜಾಗಿದ್ದವು. ಮಠ ಮತ್ತು ಗುರುಗಳ ಬಗ್ಗೆ ಅಪಾರ ಭಕ್ತಿಯುಳ್ಳ ಅವರು ಒಮ್ಮೆ ಮನೆಯಿಂದ ಹೊರಬಂದವರೇ ಯಥಾಪ್ರಕಾರ ಸಂಜೆ ವಾಯುವಿಹಾರಕ್ಕೆ ಗುರುಗಳು ದಯಮಾಡಿಸುತ್ತಿದ್ದಾರೆಂದು ಭಾವಿಸಿ ಬಗ್ಗಿ ನಮಸ್ಕರಿಸಿದರು. ಆದರೆ ಆ ದಿನ ದಾರಿಯಲ್ಲಿ ಬರುತ್ತಿದ್ದವರು ನಾವಲ್ಲ; ಕೆಂಪುಸೀರೆಯನ್ನುಟ್ಟಿದ್ದ ಒಬ್ಬ ಮುಸ್ಲಿಂ ಮಹಿಳೆ! 'ಅಯ್ಯೋ ಮೇಷ್ಟ್ರೇ ನಾನು ಫಾತಿಮಾ' ಎಂದು ಆ ಮುಸ್ಲಿಂ ಮಹಿಳೆ ಗಲಿಬಿಲಿಗೊಂಡು ಅವರ ಕಾಲಿಗೆ ಅಡ್ಡಬಿದ್ದು ಕ್ಷಮೆ ಯಾಚಿಸಿದಳು. ಅಧ್ಯಾಪಕರಿಗಿಂತ ಆ ಮುಸ್ಲಿಂ ಮಹಿಳೆಗೇ ಹೆಚ್ಚು ಮುಜುಗರವುಂಟಾಗಿತ್ತು!

ಕೆಲವೊಮ್ಮೆ ತಪ್ಪು ಮಾಡಿದವರಿಗೆ ಮುಜುಗರವಾಗದೆ ತಪ್ಪು ಮಾಡದವರಿಗೆ ಮುಜುಗರ ಉಂಟಾಗುತ್ತದೆ ಎಂದರೆ ನೀವು ಆಶ್ಚರ್ಯಪಡಬೇಕಾಗಿಲ್ಲ. ನಿಮ್ಮ ಬಾಲ್ಯವನ್ನು ನೆನೆಸಿಕೊಳ್ಳಿ. ಈ ಪ್ರಪಂಚದಲ್ಲಿ ಹುಟ್ಟಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಅವರವರ ತಾಯಂದಿರಿಗೆ ಮುಜುಗರವನ್ನುಂಟುಮಾಡುತ್ತಲೇ ದೊಡ್ಡವರಾಗಿ ಬೆಳೆದಿದ್ದಾರೆ. 'An undisciplined child embarrases his mother' (ಅಶಿಸ್ತಿನ ಮಗು ತಾಯಿಗೆ ಮುಜುಗರವನ್ನುಂಟುಮಾಡುತ್ತದೆ) ಎಂಬ ಮಾತಿನ ಅರ್ಥವನ್ನು ತಾಯಂದಿರಿಗೆ ಹೆಚ್ಚಾಗಿ ವಿವರಿಸಬೇಕಾಗಿಲ್ಲ. ಇನ್ನು ಕೆಲವೊಮ್ಮೆ ತಪ್ಪು ಮಾಡಿದ ವ್ಯಕ್ತಿಗೆ ತಾನು ಮಾಡಿದ ತಪ್ಪಿನ ಅರಿವು ತಕ್ಷಣವೇ ಉಂಟಾಗದೆ ತಿಳಿ ಹೇಳಿದ ಮೇಲೆ ಮುಜುಗರಕ್ಕೆ ಒಳಗಾಗುವ ಸಂದರ್ಭಗಳೂ ಉಂಟು. ಒಬ್ಬ ತಾಯಿ ತನ್ನ ಮಗನೊಂದಿಗೆ ತಿರುಪತಿಗೆ ಯಾತ್ರೆ ಹೋಗಿದ್ದಳು. ರೂಮನ್ನು ಬಾಡಿಗೆಗೆ ಪಡೆಯುವಾಗ ಹೋಟೆಲ್ ಮಾಲೀಕ ಜೊತೆಯಲ್ಲಿರುವ ಹುಡುಗ ಯಾರು ಎಂದು ಕೇಳಿದ. ಅಷ್ಟಾಗಿ ತೆಲುಗು ಬಾರದಿದ್ದ ತಾಯಿ ರಾಮುಡು, ಭೀಮುಡು ಎನ್ನುವಂತೆ ಕನ್ನಡದ ಶಬ್ದಗಳಿಗೆ 'ಡು' ಸೇರಿಸಿದರೆ ತೆಲುಗು ಆಗುತ್ತದೆಯೆಂದು ಭಾವಿಸಿ 'ಮಗಡು' ಎಂದು ಉತ್ತರಿಸಿದಳಂತೆ! ತೆಲುಗಿನಲ್ಲಿ 'ಮೊಗಡು' ಎಂದರೆ ಗಂಡ!

ಮುಜುಗರಕ್ಕೆ ಒಳಗಾದ ವ್ಯಕ್ತಿ ಎಲ್ಲ ಸಂದರ್ಭಗಳಲ್ಲೂ ನಕ್ಕು ಮರೆಯಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಈ ಮುಂದಿನ ಸಂದರ್ಭವನ್ನು ಗಮನಿಸಿ. ಒಮ್ಮೆ ಇಂಗ್ಲೆಂಡಿನ ರಾಜಕುಮಾರ ಚಾರ್ಲ್ಸ್ ಮಧ್ಯಪ್ರದೇಶದ ಭೂಪಾಲ್ ಸಮೀಪದಲ್ಲಿ ಹುಲಿಸಂರಕ್ಷಣೆಗಾಗಿ ನಿರ್ಮಿಸಿರುವ ಕಾನ್ಹಾ ರಾಷ್ಟ್ರೀಯ ಉದ್ಯಾನವನವನ್ನು ನೋಡಲು ಬಂದಿದ್ದರಂತೆ. ಅವರನ್ನು ಗೌರವದಿಂದ ಬರಮಾಡಿಕೊಂಡ ಜಿಲ್ಲಾ ಕಲೆಕ್ಟರ್ ಕಾರಿನಲ್ಲಿ ಉದ್ಯಾನವನದತ್ತ ಕರೆದುಕೊಂಡು ಹೋದರಂತೆ. ಸಂಜೆ ಮಬ್ಬುಗತ್ತಲಾಗಿತ್ತು. ದಾರಿಯುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಮಹಿಳೆಯರು ಬಹಿರ್ದೆಶೆಗೆ

ಕುಳಿತುಕೊಂಡಿದ್ದರು. ಕಾರಿನ ಬೆಳಕು ಬಿದ್ದತಕ್ಷಣವೇ ಎಲ್ಲರೂ ನಾಚಿಕೆಯಿಂದ ಎದ್ದು ನಿಂತರು. ಈ ಮಹಿಳೆಯರು ಏಕೆ ಹೀಗೆ ನಿಂತಿದ್ದಾರೆಂದು ರಾಜಕುಮಾರ ಚಾರ್ಲ್ಸ್ ಕೇಳಿದ. ಅದಕ್ಕೆ "Sir, they were all waiting for your arrival and now they got up to greet you" (ಈ ಮಹಿಳೆಯರು ತಮ್ಮ ಬರವಿಗಾಗಿ ಕಾಯುತ್ತಿದ್ದರು; ಈಗ ತಮ್ಮನ್ನು ಸ್ವಾಗತಿಸಲು ಎದ್ದು ನಿಂತಿದ್ದಾರೆ) ಎಂದು ಜಿಲ್ಲಾ ಕಲೆಕ್ಟರ್ ಜಾಣತನದಿಂದ ಉತ್ತರಿಸಿದನಂತೆ! ಈ ಪ್ರಸಂಗವನ್ನು ಡಾ. ಮನು ಕುಲಕರ್ಣಿಯವರು ತಮ್ಮ ಇತ್ತೀಚಿನ "Managing Human Development" ಎಂಬ ಪುಸ್ತಕದಲ್ಲಿ ಉಲ್ಲೇಖಿಸುತ್ತಾ ನಮ್ಮ ದೇಶದ ಅಧಿಕಾರಶಾಯಿಯು ದೇಶದ ಗೌರವವನ್ನು ಕಾಪಾಡಲು ಪ್ರಯತ್ನಿಸುತ್ತಿದೆಯೇ ಹೊರತು ಈ ದೇಶದ ದುರ್ಭಾಗ್ಯ ಮಹಿಳೆಯರ ಮಾನವನ್ನು ಕಾಪಾಡುವ ಪ್ರಯತ್ನ ಮಾಡುತ್ತಿಲ್ಲ ಎಂದು ವಿಷಾದಿಸಿದ್ದಾರೆ (This is how our smart bureaucracy protects the image of India but does nothing to these unfotunate women). ಈ ಹಿನ್ನೆಲೆಯಲ್ಲಿ ಕೆಲವು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ತಂದಿದ್ದ 'ನಿರ್ಮಲಕರ್ನಾಟಕ ಯೋಜನೆ' ನಮಗೆ ತುಂಬಾ ಮೆಚ್ಚುಗೆಯಾಗಿದ್ದು ಈ ಯೋಜನೆಯಡಿಯಲ್ಲಿ ನಮ್ಮ ಮಠದ ವತಿಯಿಂದ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ನೂರಾರು ಹಳ್ಳಿಗಳನ್ನು ಆಯ್ಕೆಮಾಡಿಕೊಂಡು ಸುಮಾರು ನಾಲ್ಕು ಸಾವಿರ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಾಣಮಾಡಿದ್ದು ಆ ಭಾಗದ ಹಳ್ಳಿಗರಿಗೆ ತುಂಬಾ ಸಂತಸವನ್ನುಂಟುಮಾಡಿತು. ಆ ಸಂದರ್ಭದಲ್ಲಿ ಒಂದು ಹಳ್ಳಿಗೆ ಹೋದಾಗ ವೃದ್ಧ ಮಹಿಳೆಯೊಬ್ಬಳು ನಮಗೆ ನಮಸ್ಕರಿಸುತ್ತಾ 'ನೀನು ನಮ್ಮ ಹೆಣ್ಣುಮಕ್ಕಳ ಮರ್ಯಾದೆ ಉಳಿಸಿದೆಯಪ್ಪಾ' ಎಂದು ಉದ್ಗರಿಸಿದ್ದು ಗ್ರಾಮೀಣ ಮಹಿಳೆಯರ ಸಂಕಟವೇನೆಂಬುದಕ್ಕೆ ಕನ್ನಡಿ ಹಿಡಿದಂತಿದೆ!

ಕ್ರೈಸ್ತ ಧರ್ಮೀಯರ ನಂಬುಗೆಯ ಪ್ರಕಾರ ಮನುಷ್ಯರಲ್ಲಿರುವ ನಾಚಿಕೆಯ ಪ್ರವೃತ್ತಿ ಮೂಲತಃ 'ಆಡಮ್' ಮತ್ತು 'ಈವ್' ಅವರಿಂದ ಬಂತು. ಈ ಮಾನವಕುಲಕೋಟಿಯ ಮೊದಲ ತಂದೆತಾಯಿಗಳಾದ ಆಡಮ್ ಮತ್ತು ಈವ್‌ರವರು 'ಈಡನ್' ಉದ್ಯಾನವನದಲ್ಲಿ ನಗ್ನರಾಗಿ ಯಾವ ಮುಜುಗರವಿಲ್ಲದೆ ವಿಹರಿಸುತ್ತಿದ್ದರಂತೆ. ಆ ಉದ್ಯಾನವನದಲ್ಲಿರುವ ಯಾವ ಹಣ್ಣನ್ನಾದರೂ ತಿನ್ನಬಹುದು, ಆದರೆ ಒಂದು ನಿರ್ದಿಷ್ಟ ಮರದಲ್ಲಿರುವ ಸೇಬಿನ ಹಣ್ಣನ್ನು ಮಾತ್ರ ತಿನ್ನಬಾರದೆಂದು ದೇವರು ಅವರಿಗೆ ಆಜ್ಞಾಪಿಸಿದ್ದನಂತೆ. ಅದರಂತೆ ಅವರು ಬಹಳ ಕಾಲ ವಿಧೇಯರಾಗಿ ನಡೆದುಕೊಂಡು ಬಂದರು. ಆದರೆ ಒಮ್ಮೆ ಸೈತಾನನ ಪ್ರಚೋದನೆಯಿಂದಾಗಿ ಈವ್ ಕುತೂಹಲದಿಂದ ಆ ನಿಷೇಧಿತ ಮರದಲ್ಲಿದ್ದ ಒಂದು ಹಣ್ಣನ್ನು ಕಿತ್ತು ಆಡಂನೊಂದಿಗೆ ಹಂಚಿಕೊಂಡು ತಿಂದಳು. ಆನಂತರ ಅವರಿಬ್ಬರ ಮನಸ್ಸಿನಲ್ಲಿ ಬತ್ತಲೆಯಾಗಿರುವುದಕ್ಕೆ ನಾಚಿಕೆಯುಂಟಾಗಿ ಮೈಮುಚ್ಚಿಕೊಳ್ಳಲು ಪ್ರಯತ್ನಿಸಿದರೆಂದು ಕ್ರೈಸ್ತರು ಹೇಳುತ್ತಾರೆ. 'ಆಡಂ' ಬೇಡವೆಂದರೂ ದೇವರಿಂದ ನಿಷೇಧಿತವಾದ ಹಣ್ಣನ್ನು ಕಿತ್ತ 'ಈವ್'ಳನ್ನು ಮನುಷ್ಯರ ಎಲ್ಲ ದುಃಖದುಮ್ಮಾನಗಳಿಗೆ ಕಾರಣಳೆಂದು ದೂಷಿಸುತ್ತಾರೆ. ವಿಭಿನ್ನಧರ್ಮೀಯರಾಗಿ ಆಲೋಚಿಸುವ ನಮಗೆ ಎಲ್ಲ ತಪ್ಪನ್ನು 'ಈವ್'ಳ ತಲೆಗೆ ಕಟ್ಟಿ 'ಆಡಂ' ಸಂಪೂರ್ಣ ನಿರಪರಾಧಿ ಎಂದು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವನಿಗೂ ಆ ಹಣ್ಣನ್ನು ತಿನ್ನಬೇಕೆಂಬ ಆಸೆ ಒಳಗೊಳಗೆ ಇತ್ತು. ಅದಕ್ಕೆ 'ಈವ್' ನಿಮಿತ್ತಳಾದಳು ಅಷ್ಟೆ. ಸಾಮಾನ್ಯವಾಗಿ ಮನುಷ್ಯರಲ್ಲಿ ಕಂಡುಬರುವ ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಬೇರೊಬ್ಬರ ಮೇಲೆ ದೋಷಾರೋಪಣೆ ಮಾಡುವ ಕೆಟ್ಟ ಪ್ರವೃತ್ತಿಯನ್ನು 'ಅಡಂ'ನಲ್ಲಿ ಕಾಣಬಹುದಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ 'ಈವ್' ಸ್ವತಃ ಹಣ್ಣನ್ನು ಕಿತ್ತು ತಂದರೂ 'ಆಡಂ'ಗೆ ಗೊತ್ತಿಲ್ಲದಂತೆ ಮರೆಯಲ್ಲಿ ತಿನ್ನುವಷ್ಟು ಸ್ವಾರ್ಥಿಯಾಗಿರಲಿಲ್ಲ. ಅವನಿಗೂ ಕೊಟ್ಟು ತಾನೂ ತಿಂದಳು. ಹೆಣ್ಣಾಗಲೀ ಗಂಡಾಗಲೀ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲೂ ಸೈತಾನನಿದ್ದಾನೆ. ಆ ಸೈತಾನನನ್ನು ದಮನ ಮಾಡುವುದೇ ಧರ್ಮದ ಮೂಲ ಗುರಿ. 'ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಃ' ಎಂಬ ಕಠೋಪನಿಷತ್ತಿನ ಮಾತಿನಂತೆ ಶ್ರೇಯಸ್ಸು (ಒಳ್ಳೆಯದು) ಮತ್ತು ಪ್ರೇಯಸ್ಸು (ಕೆಟ್ಟದ್ದು) ಪ್ರತಿಯೊಬ್ಬ ಮನುಷ್ಯನನ್ನು ಅರಸಿಕೊಂಡು ಬರುತ್ತವೆ, ಅವುಗಳ ಆಯ್ಕೆ ನಿಮ್ಮ ಕೈಯಲ್ಲಿದೆ ಎಂಬುದು ಇಲ್ಲಿ ಚಿಂತನಾರ್ಹ.

ಮುಜುಗರಕ್ಕೆ ಒಳಗಾದ ವ್ಯಕ್ತಿಯ ಮನಸ್ಸಿಗೆ ಉಂಟಾಗುವ ವೇದನೆ ಅಸಹನೀಯವಾದರೂ ಬಹಳ ಕಾಲ ಇರುವುದಿಲ್ಲ. ಮುಜುಗರದ ಪ್ರಸಂಗಗಳು ಹಠಾತ್ತನೆ ಸಂಭವಿಸುತ್ತವೆ; ಕಾಲಾನಂತರ ಮರೆತುಹೋಗುತ್ತವೆ. ಅವುಗಳ ಹಿಂದೆ ಯಾರಿಗೂ ಯಾವ ದುರುದ್ದೇಶವೂ ಇರುವುದಿಲ್ಲ. ಆದರೆ ಅವಮಾನ ಪ್ರಸಂಗಗಳು ಹಾಗಲ್ಲ. ಅವು ತಾವಾಗಿಯೇ ಘಟಿಸುವುದಿಲ್ಲ. ಅವುಗಳ ಹಿಂದೆ ಆಗದ ವ್ಯಕ್ತಿಯೊಬ್ಬನ ಕೈವಾಡವಿರುತ್ತದೆ. ಅವನು ತನಗಾಗದ ವ್ಯಕ್ತಿಯನ್ನು ಅವಮಾನಗೊಳಿಸಬೇಕೆಂಬ ಕೆಟ್ಟ ಉದ್ದೇಶದಿಂದಲೇ ಸಂಚು ಮಾಡುತ್ತಾನೆ. ಅಂತಹ ದುಷ್ಟವ್ಯಕ್ತಿಯು ಮಾಡುವ ಸನ್ನಾಹದಿಂದ ಅವಮಾನಿತನಾಗುವ ವ್ಯಕ್ತಿಗೆ ಆಗುವ ಮಾನಸಿಕ ಕ್ಲೇಶ ಅಷ್ಟಿಷ್ಟಲ್ಲ. ಈ ಮುಂದಿನ ಕೆಲವು ಪ್ರಸಂಗಗಳನ್ನು ಗಮನಿಸಿ.

ಶಕುನಿಯ ಕುತಂತ್ರದಿಂದ ಪಗಡೆಯಾಟದಲ್ಲಿ ಗೆದ್ದ ದುರ್ಯೋಧನನು ದ್ರೌಪದಿಯನ್ನು ರಾಜಸಭೆಗೆ ಕರೆತರಲು ದೂತನೊಬ್ಬನನ್ನು ಕಳುಹಿಸುತ್ತಾನೆ. ರಾಜಾಜ್ಞೆಯಂತೆ ದೂತ ಕರೆಯಲು ಹೋದಾಗ ದ್ರೌಪದಿ ಬರಲು ನಿರಾಕರಿಸುತ್ತಾಳೆ. ಧರ್ಮರಾಯ ತನ್ನನ್ನು ಮತ್ತು ತನ್ನ ತಮ್ಮಂದಿರನ್ನು ಪಣಕ್ಕೆ ಇಟ್ಟು ಸೋತಮೇಲೆ ನನ್ನನ್ನು ಪಣಕ್ಕೆ ಇಟ್ಟು ಸೋತಿದ್ದು ಸರಿಯೇ? ಎಂಬ ಈ ಧರ್ಮಸೂಕ್ಷ್ಮವನ್ನು ರಾಜಸಭೆಯಲ್ಲಿರುವ ಹಿರಿಯರು ಮೊದಲು ನಿರ್ಧರಿಸಲಿ ಆಮೇಲೆ ಬರುತ್ತೇನೆ ಎಂದು ದ್ರೌಪದಿ ದೂತನೊಂದಿಗೆ ಹೇಳಿಕಳುಹಿಸುತ್ತಾಳೆ. ಈ ಮಾತನ್ನು ದೂತನಿಂದ ಕೇಳಿದ ದುರ್ಯೋಧನ ಕ್ರುದ್ಧನಾಗಿ ದ್ರೌಪದಿಯನ್ನು ಕೂಡಲೇ ರಾಜಸಭೆಗೆ ಎಳೆದು ತರಲು ತನ್ನ ತಮ್ಮನಾದ ದುಃಶಾಸನನನ್ನು ಕಳುಹಿಸಿದಾಗ ದ್ರೌಪದಿ ಮತ್ತು ದುಃಶಾಸನರ ಮಧ್ಯೆ ನಡೆದ ಸಂಭಾಷಣೆಯನ್ನು ಕುಮಾರವ್ಯಾಸನ ಮಾತುಗಳಲ್ಲಿ ಕೇಳಿ:

**ಜನಪನನುಜನು ನೀನೆನಗೆ ಮೈ-**
**ದುನನಲೇ ತಪ್ಪೇನು ಯಮ ನಂ-**
**ದನನು ಸೋಲಲಿ ನನ್ನ ಪ್ರಶ್ನೆಗೆ ಕೊಡಲಿ ಮರುಮಾತ**
**ಅನುಜ ಕೇಳ್ಳೆ ಪುಷ್ಪವತಿ ತಾ-**
**ನೆನಗೆ ರಾಜಸಭಾ ಪ್ರವೇಶವ-**

**ದನುಚಿತವಲೇ ಹೇಳೆನಲು ಖಳರಾಯ ಖತಿಗೊಂಡ ॥ (14.64)**

**ಎಲ್ಲಿಯದು ದುಷ್ಪ್ರಶ್ನೆ ಮರು ಮಾ-**
**ತೆಲ್ಲಿಯದು ನೀ ಪುಷ್ಪವತಿಯಾ-**
**ಗಲ್ಲಿ ಫಲವತಿಯಾಗು ನಡೆ ಕುರುರಾಯ ಭವನದಲಿ**
**ಖುಲ್ಲರೈವರು ತಮ್ಮ ಸೋತರು**
**ಬಲ್ಲವಿಕೆಯುಚಿತವನು ಮೌಳಿಯ-**
**ನಲ್ಲಿ ತೋರಾಯೆನುತ ತಪ್ಪಿದನಹಹ ಸಿರಿಮುಡಿಗೆ ॥ (14.65)**

'ನೀನು ನನಗೆ ಮೈದುನ, ಧರ್ಮರಾಯ ಸೋತಿರಬಹುದು, ನನ್ನ ಪ್ರಶ್ನೆಗೆ ಮೊದಲು ಉತ್ತರ ಬೇಕು, ನಾನು ಪುಷ್ಪವತಿಯಾಗಿದ್ದೇನೆ, ಇಂತಹ ಸಂದರ್ಭದಲ್ಲಿ ರಾಜಸಭೆಗೆ ಬರುವುದು ಅನುಚಿತ, ಹೋಗಿ ಹೇಳು' ಎಂದು ದ್ರೌಪದಿ ಸೌಜನ್ಯಯುತವಾಗಿ ಹೇಳಿದರೂ ಲೆಕ್ಕಿಸದೆ 'ಪುಷ್ಪವತಿಯಾದರೇನಂತೆ ಫಲವತಿಯಾಗು ನಡೆ ಕುರುರಾಯ ಭವನದಲಿ' ಎನ್ನುವ ದುಃಶಾಸನನ ಕೀಳುದರ್ಜೆಯ ಧಾರ್ಷ್ಟ್ಯದ ಮಾತುಗಳು, ಮಾತೃಸ್ವರೂಪಳಾದ ಅತ್ತಿಗೆಯ ಸಿರಿಮುಡಿಗೆ ಕೈಹಾಕಿ ತಲೆಗೂದಲನ್ನು ಜಗ್ಗುವ ಅವನ ದುರ್ವರ್ತನೆ ಅಸಹ್ಯಕರವಾಗಿ ಕಾಣಿಸುತ್ತವೆ. ಇಂತಹ ನಂಜಿನ ಮಾತುಗಳೇ ಅವಮಾನಿತ ವ್ಯಕ್ತಿಯ ಮನಸ್ಸಿನಲ್ಲಿ ಸೇಡಿನ ಮನೋಭಾವಕ್ಕೆ ಕಾರಣವಾಗುವುದು. ಅದರ ಪರಿಣಾಮವೇ 'ಕುಡಿವೆಂ ದುಃಶಾಸನನೋರಸ್ಥಲಮನಗಲೆ ಪೋಳ್ದುರ್ದನ ಕೆನ್ನೆತ್ತರಂ ಪೊಕ್ಕುಡಿವೆಂ...' (ಪಂಪಭಾರತ 7.13) ಎಂದು ಆರ್ಭಟಿಸುತ್ತಾ ದ್ರೌಪದಿಯ ಬಿಚ್ಚಿದ ಮುಡಿಯನ್ನು ದುಃಶಾಸನನ ಒಡಲ ರಕ್ತದಿಂದ ಅಭಿಸಿಂಚನ ಮಾಡಿ ತಲೆಬಾಚುತ್ತೇನೆಂದು 'ರಕ್ತಪಿಪಾಸು'ವಾಗಿ ಕಾಣಿಸುವ ಭೀಮನ ಪ್ರತಿಜ್ಞೆ.

ಸಹೃದಯ ಓದುಗರೇ! 'ಮುಗಿದಾವ ನಮ್ಮ ಜೋಳ, ಉಳಿದಾವ ನಮ್ಮ ಹಾಡು' ಎಂದು ಗ್ರಾಮೀಣ ಮಹಿಳೆಯರು ಹಾಡುವಂತೆ ನಾವು ಬರೆಯಬೇಕೆಂದಿರುವ ಮಹಿಳೆಯರ ಗೋಳಿನ ಕಥೆ ಇನ್ನೂ ಮುಗಿದಿಲ್ಲ. ಮುಗಿಯುವುದೂ ಇಲ್ಲ ಎಂದು ಅನಿಸುತ್ತದೆ. ಉಳಿದ ಪ್ರಕರಣಗಳನ್ನು ಕುರಿತು ಬರೆಯಲು ಈ ವಾರ ಆಗುತ್ತಿಲ್ಲ. ಮುಂದಿನ ವಾರ ಬರೆಯುವವರೆಗೂ ಈ ಮೇಲೆ ಬರೆದ ವಿಚಾರಗಳ ಬಗ್ಗೆ ಚಿಂತಿಸಿರಿ. ಸಮಕಾಲೀನ ಸಮಾಜದಲ್ಲಿ ಆಧುನಿಕ ಮಹಿಳೆಯರ ಮೇಲೆ ದಾರಿಬೀದಿಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳನ್ನು ನೋಡಿದಾಗ ಈಗಲೂ ಪ್ರಾಚೀನ ಮಹಾಭಾರತ ಜೀವಂತವಾಗಿದೆಯೆಂದು ನಿಮಗೆ ಅನ್ನಿಸುವುದಿಲ್ಲವೆ?

**22.7.2009**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑